

ಕಡೆಯವರು ಬಂದಾಗ ಈಕೆ ಕಾಣದಿರಲೆಂದು ಮಿಡುಕುವ ಹೆಂಗಸರು, ಅಂದ ಚೆಂದ ನೋಡಿ ಮಗ ಹಳ್ಳಕ್ಕೆ ಬಿದ್ದ ಎಂದು ಹಲುಬುವ ಅತ್ತೆ, ಸಹಾಯ ಮಾಡಿ, ಕೃತಜ್ಞತೆಯ ರೂಪದಲ್ಲಿ ಅನೈತಿಕ ಸಂಬಂಧವನ್ನು ಹೊಂದಲಿಚ್ಛಿಸುವ ಗಂಡಸು, ಹೆಣ್ಣುಮಕ್ಕಳು ಹುಟ್ಟುವುದೇ ಶಾಪ ಎನ್ನುವ ತಂದೆ, ಮದುವೆಗೂ ಮುಂಚೆಯೇ ತೊನ್ನು ಬರಬಾರದಿತ್ತೇ ಎಂದು ಲೆಕ್ಕಾಚಾರ ಹಾಕುವ ಗಂಡ, 'ಇಂತಹ ಚೆಲುವೆಗೆ ಈ ಕಾಯಿಲೆಯೇ? ಪೂರ್ ಗರ್ಲ್' ಎನ್ನುವ ಡಾಕ್ಟರ್ ಎಲ್ಲರೂ ಇದ್ದಾರೆ.

ಆದರೆ ಆಕೆ ಏಕಾಂಗಿ.

ಸೌಂದರ್ಯವನ್ನು ಮನಸಾರೆ ಮೆಚ್ಚಿದವರು ತೊನ್ನಿನ ಕಲೆಯ ಕಾರಣಕ್ಕೆ ದೂರ ಸರಿವಾಗ, ಚೆಲುವನ್ನು ಕಂಡು ಕರುಬಿದವರು ತಕ್ಕ ಶಾಸ್ತಿಯಾಯಿತೆಂದು ಶಾಪವಿಕ್ಕುವಾಗ ಲೋಕರೂಢಿಯೇ ವಿಚಿತ್ರವೆನಿಸುತ್ತದೆ. ಚೆಲುವಿನೊಂದಿಗೆ ಬುದ್ಧಿವಂತಿಕೆ, ಸಚ್ಚಾರಿತ್ರ್ಯ, ಪ್ರತಿಭೆ, ಒಳ್ಳೆಯತನಗಳಿದ್ದರೂ ಎಲ್ಲವೂ ಗೌಣವೆನಿಸುವ, ವ್ಯಕ್ತಿತ್ವಕ್ಕಿಂತ ಬಾಹ್ಯ ರೂಪ,